# ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** ಸುವರ್ಣ ಗ್ರಾಮೋದಯ ಯೋಜನೆಯಡಿ ಆಯ್ಕೆಯಾಗಿರುವ ಗ್ರಾಮಗಳಲ್ಲಿನ ಕಾರ್ಯಕ್ರಮಗಳ ಅನುಷ್ಠಾನಕ್ಕಾಗಿ 2012-13ನೇ ಸಾಲಿನಲ್ಲಿ 4ನೇ ಕಂತಿನ ಅನುದಾನ ಬಿಡುಗಡೆ ಕುರಿತು.

**ಉಲ್ಲೇಖ:**
1. ಸರ್ಕಾರಿ ಆದೇಶ ಸಂಖ್ಯೆ:ಗ್ರಾಅಪ:150:ಆರ್.ಆರ್.ಸಿ.2006, ದಿ:07.10.2006.
2. ಸರ್ಕಾರಿ ಆದೇಶ ಸಂಖ್ಯೆ:ಗ್ರಾಅಪ:13/ಆಂ.ಆ.ಸ./2012, ದಿ:02.04.2012.
3. ಸರ್ಕಾರಿ ಆದೇಶ ಸಂಖ್ಯೆ:ಗ್ರಾಅಪ:109:ಸುಗ್ರಾಯೋ:2012, ದಿ:27.11.2012.
4. ಸರ್ಕಾರಿ ಆದೇಶ ಸಂಖ್ಯೆ:ಗ್ರಾಅಪ:109:ಸುಗ್ರಾಯೋ:2012, ದಿ:17.01.2013.
5. ಸರ್ಕಾರಿ ಆದೇಶ ಸಂಖ್ಯೆ:ಗ್ರಾಅಪ:109:ಸುಗ್ರಾಯೋ:2012, ದಿ:14.02.2013.

ಪ್ರಸ್ತಾವನೆ:

ಉಲ್ಲೇಖ(2)ರ ಆದೇಶದಲ್ಲಿ ಸುವರ್ಣ ಗ್ರಾಮೋದಯ ಯೋಜನೆಯನ್ನು 2012-13ನೇ ಸಾಲಿನಲ್ಲಿ ಮುಂದುವರಿಸಲಾಗಿದೆ. ಈ ಯೋಜನೆಗಾಗಿ 2012-13ನೇ ಸಾಲಿನ ಆಯವ್ಯಯದಲ್ಲಿ ₹ **34913.98** ಲಕ್ಷಗಳ ಅನುದಾನವನ್ನು ನಿಗದಿಪಡಿಸಲಾಗಿದೆ. ಈ ಪೈಕಿ ಬಂಡವಾಳ ವೆಚ್ಚಗಳು, ವಿಶೇಷ ಘಟಕ ಯೋಜನೆ ಮತ್ತು ಗಿರಿಜನ ಉಪಯೋಜನೆಯ ಲೆಕ್ಕ ಶೀರ್ಷಿಕೆಯಡಿ ಕ್ರಮವಾಗಿ ₹ **21809.96**, ₹ **8200.01** ಮತ್ತು ₹ **4904.01** ಲಕ್ಷಗಳು ನಿಗದಿಯಾಗಿರುತ್ತದೆ. ವಿಶೇಷ ಘಟಕ ಯೋಜನೆ ಮತ್ತು ಗಿರಿಜನ ಉಪ ಯೋಜನೆಯಡಿ ಒದಗಿಸಿರುವ ಅನುದಾನವನ್ನು ಜಿಲ್ಲೆಗಳಿಗೆ/ಗ್ರಾಮಗಳಿಗೆ ಹಂಚಿಕೆಯಾಗಿರುವ ಅನುದಾನದಲ್ಲಿ ಆಯಾ ಲೆಕ್ಕ ಶೀರ್ಷಿಕೆಯಡಿ ಕಡ್ಡಾಯವಾಗಿ ಭರಿಸತಕ್ಕದ್ದು. ಸುವರ್ಣ ಗ್ರಾಮೋದಯ ಯೋಜನೆಯಡಿ ಆಯ್ಕೆಯಾಗಿರುವ ಗ್ರಾಮಗಳ ಕಾರ್ಯಕ್ರಮ ಅನುಷ್ಠಾನಕ್ಕಾಗಿ ಉಲ್ಲೇಖ(3), (4) ಮತ್ತು (5)ರಲ್ಲಿ ಬಿಡುಗಡೆಯಾದ ಅನುದಾನದ ಜೊತೆಗೆ ಅನುದಾನ ಬೇಡಿಕೆಗೆ ಮನವಿ ಸಲ್ಲಿಸಲಾದ ಅನುಬಂಧದಲ್ಲಿ ಸೂಚಿಸಿರುವ 15 ಜಿಲ್ಲೆಗಳಿಗೆ ಅನುದಾನ ಬಿಡುಗಡೆ ಅಗತ್ಯವಿರುತ್ತದೆ. ಪ್ರಯುಕ್ತ ಈ ಆದೇಶ.

**ಸರ್ಕಾರಿ ಆದೇಶ ಸಂಖ್ಯೆ:ಗ್ರಾಅಪ:109:ಸುಗ್ರಾಯೋ:2012-13, ಬೆಂಗಳೂರು, ದಿನಾಂಕ:13.03.2013**

ಮೇಲಿನ ಪ್ರಸ್ತಾವನೆಯಂತೆ ಸುವರ್ಣ ಗ್ರಾಮೋದಯ ಯೋಜನೆ ಅನುಷ್ಠಾನಕ್ಕಾಗಿ ಕೆಳಕಂಡ ಲೆಕ್ಕ ಶೀರ್ಷಿಕೆಗಳಡಿ ₹ **8728.50** ಲಕ್ಷಗಳನ್ನು (ರೂಪಾಯಿ ಎಂಟು ಸಾವಿರದ ಏಳು ನೂರ ಇಪ್ಪತ್ತೆಂಟು ಲಕ್ಷದ ಐವತ್ತು ಸಾವಿರಗಳು ಮಾತ್ರ) ಅನುಬಂಧದಲ್ಲಿ ವಿವರಿಸಲಾದಂತೆ ರಾಜ್ಯದ 15 ಜಿಲ್ಲಾ ಪಂಚಾಯತ್‌ಗಳಿಗೆ ಬಿಡುಗಡೆ ಮಾಡಲಾಗಿದೆ. ಸದರಿ ಅನುದಾನವನ್ನು ಈ ಕೆಳಕಂಡ ಲೆಕ್ಕ ಶೀರ್ಷಿಕೆಗಳಡಿ ಭರಿಸತಕ್ಕದ್ದು.

1. 4215-02-800-0-02-132 (ಯೋಜನೆ) ಬಂಡವಾಳ ವೆಚ್ಚಗಳು - ₹ 5452.69 ಲಕ್ಷಗಳು
2. 4215-02-800-0-02-422 (ಯೋಜನೆ) ವಿಶೇಷ ಘಟಕ ಯೋಜನೆ - ₹ 2050.32 ಲಕ್ಷಗಳು
3. 4215-02-800-0-02-423 (ಯೋಜನೆ) ಗಿರಿಜನ ಉಪ ಯೋಜನೆ - ₹ 1225.48 ಲಕ್ಷಗಳು

**ಒಟ್ಟು - ₹ 8728.50 ಲಕ್ಷಗಳು**

ಈ ಆದೇಶದಲ್ಲಿ ಬಿಡುಗಡೆ ಮಾಡಿರುವ ಅನುದಾನವನ್ನು ಸುವರ್ಣ ಗ್ರಾಮೋದಯ ಯೋಜನೆಯಡಿ ಆಯ್ಕೆ ಮಾಡಿದ ಗ್ರಾಮಗಳ ಅನುಮೋದಿತ ಗ್ರಾಮಾಭಿವೃದ್ಧಿ ಯೋಜನೆಯ ಕಾಮಗಾರಿಗಳ ಅನುಷ್ಠಾನಕ್ಕಾಗಿ ಮಾತ್ರ ವಿನಿಯೋಗಿಸುವುದು.

ವಿಶೇಷ ಘಟಕ ಯೋಜನೆ ಮತ್ತು ಗಿರಿಜನ ಉಪ ಯೋಜನೆಯಡಿ ಒದಗಿಸಿರುವ ಅನುದಾನವನ್ನು ಜಿಲ್ಲೆಗಳಿಗೆ/ಗ್ರಾಮಗಳಿಗೆ ಹಂಚಿಕೆಯಾಗಿರುವ ಅನುದಾನದಲ್ಲಿ ಆಯಾ ಲೆಕ್ಕ ಶೀರ್ಷಿಕೆಯಡಿ ಕಡ್ಡಾಯವಾಗಿ ಭರಿಸತಕ್ಕದ್ದು. ವಿಶೇಷ ಘಟಕ ಯೋಜನೆ ಮತ್ತು ಗಿರಿಜನ ಉಪ ಯೋಜನೆಯಡಿ ಸಾಧಿಸಿದ ಆರ್ಥಿಕ ಮತ್ತು ಭೌತಿಕ ಪ್ರಗತಿಯ ವಿವರವಾದ ವರದಿಯನ್ನು ಪ್ರತ್ಯೇಕವಾಗಿ ಪ್ರತಿ ಮಾಹೆ ಸರ್ಕಾರಕ್ಕೆ ಸಲ್ಲಿಸುವುದು.

ಈ ಅನುದಾನ ಬಿಡುಗಡೆ ಬಗ್ಗೆ ಸರ್ಕಾರದ ಆರ್ಥಿಕ ಇಲಾಖೆಯ ಸಹಮತಿಯನ್ನು ಟಿಪ್ಪಣಿ ಸಂಖ್ಯೆ:ಆಇ:432:ವೆಚ್ಚ-06/2012, ದಿನಾಂಕ:08.03.2013ರಲ್ಲಿ ಪಡೆದು ಈ ಆದೇಶವನ್ನು ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

(ಬೂವನಹಳ್ಳಿ ನಾಗರಾಜ್) 13/3/13
ನಿರ್ದೇಶಕರು(ಸು.ಗ್ರಾ.ಯೋ.) ಹಾಗೂ
ಸರ್ಕಾರದ ಪದನಿಮಿತ್ತ ಉಪ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ

ಪ್ರತಿಗಳು:

1. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು/ಮುಖ್ಯ ಲೆಕ್ಕಾಧಿಕಾರಿಗಳು, ಗದಗ/ಬೆಂಗಳೂರು(ಗ್ರಾ)/ ಬೆಂಗಳೂರು(ನ)/ಹಾವೇರಿ/ರಾಮನಗರ/ಹಾಸನ/ಬಿಜಾಪುರ/ತುಮಕೂರು/ರಾಯಚೂರು/ದಾವಣಗೆರೆ/ ಚಿಕ್ಕಬಳ್ಳಾಪುರ/ಚಿತ್ರದುರ್ಗ/ಕೋಲಾರ/ಬಳ್ಳಾರಿ/ಯಾದಗೀರ್ ಜಿಲ್ಲಾ ಪಂಚಾಯತ್‌ಗಳು.
2. ಜಿಲ್ಲಾ ಖಜಾನಾಧಿಕಾರಿಗಳು, ಗದಗ/ಬೆಂಗಳೂರು(ಗ್ರಾ)/ಬೆಂಗಳೂರು(ನ)/ಹಾವೇರಿ/ರಾಮನಗರ/ ಹಾಸನ/ಬಿಜಾಪುರ/ತುಮಕೂರು/ರಾಯಚೂರು/ದಾವಣಗೆರೆ/ಚಿಕ್ಕಬಳ್ಳಾಪುರ/ಚಿತ್ರದುರ್ಗ/ಕೋಲಾರ/ ಬಳ್ಳಾರಿ/ಯಾದಗೀರ್ ಜಿಲ್ಲೆಗಳು.
3. ಮಹಾಲೇಖಪಾಲರು, ಬೆಂಗಳೂರು.
4. ನಿರ್ದೇಶಕರು, ರಾಜ್ಯ ಹುಜೂರ್ ಖಜಾನೆ, ಬೆಂಗಳೂರು.
5. ಉಪನಿರ್ದೇಶಕರು, ಖಜಾನೆ ಗಣಕ ಮಾಹಿತಿ ಜಾಲ, ಖನಿಜ ಭವನ, ಬೆಂಗಳೂರು.
6. ಖಜಾನೆಗಳ ಉಪ ನಿರ್ದೇಶಕರು, ಪೋಡಿಯಂ ಬ್ಲಾಕ್, ವಿಶ್ವೇಶ್ವರಯ್ಯ ಟವರ್, ಬೆಂಗಳೂರು.
7. ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಧಾನಸೌಧ, ಬೆಂಗಳೂರು.
8. ಸರ್ಕಾರದ ಪ್ರಧಾನ ಕಾರ್ಯದರ್ಶಿ/ಕಾರ್ಯದರ್ಶಿಗಳ ಆಪ್ತ ಕಾರ್ಯದರ್ಶಿಗಳು, ಗ್ರಾ.ಅ.& ಪಂ.ರಾಜ್ ಇಲಾಖೆ.
9. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳ ಆಪ್ತ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ, ವಿಧಾನಸೌಧ, ಬೆಂಗಳೂರು.
10. ಆಂತರಿಕ ಆರ್ಥಿಕ ಸಲಹೆಗಾರರು, ಗ್ರಾ.ಅ. ಮತ್ತು ಪಂ.ರಾಜ್ ಇಲಾಖೆ, ಬೆಂಗಳೂರು.
11. ಸರ್ಕಾರದ ಉಪಕಾರ್ಯದರ್ಶಿ(ಆಡಳಿತ) ಗ್ರಾ.ಅ.ಮತ್ತು ಪಂ.ರಾಜ್ ಇಲಾಖೆ, ಕಂಪ್ಯೂಟರ್ ಸೆಲ್, ಈ ಆದೇಶವನ್ನು ಇಲಾಖೆಯ ವೆಬ್‌ಸೈಟ್‌ನಲ್ಲಿ ಪ್ರಕಟಿಸುವುದು.
12. ರಕ್ಷ ಕಡತಕ್ಕೆ/ಹೆಚ್ಚುವರಿ ಪ್ರತಿ.

## ಅನುಬಂಧ

**2012–13ನೇ ಸಾಲಿನ ಸುವರ್ಣ ಗ್ರಾಮೋದಯ ಯೋಜನೆಯ ಅನುದಾನ ಬಿಡುಗಡೆ**

**ಸರ್ಕಾರ ಆದೇಶ ಸಂಖ್ಯೆ:ಗ್ರಾಅಪ:109:ಸುಗ್ರಾಯೋ:2012–13, ದಿನಾಂಕ:13.03.2013**

(ರೂ.ಲಕ್ಷಗಳಲ್ಲಿ)

| ಕ್ರ.ಸಂ. | ಜಿಲ್ಲೆ | ಬಂಡವಾಳ ವೆಚ್ಚ | SCP | TSP | ಒಟ್ಟು |
|---|---|---|---|---|---|
| 1 | ಗದಗ | 312.35 | 117.45 | 70.20 | 500.00 |
| 2 | ಬೆಂಗಳೂರು(ಗ್ರಾ) | 124.94 | 46.98 | 28.08 | 200.00 |
| 3 | ಬೆಂಗಳೂರು(ನ) | 624.70 | 234.90 | 140.40 | 1000.00 |
| 4 | ಹಾವೇರಿ | 455.09 | 171.12 | 102.28 | 728.50 |
| 5 | ರಾಮನಗರ | 374.82 | 140.94 | 84.24 | 600.00 |
| 6 | ಹಾಸನ | 624.70 | 234.90 | 140.40 | 1000.00 |
| 7 | ಬಿಜಾಪುರ | 499.76 | 187.92 | 112.32 | 800.00 |
| 8 | ತುಮಕೂರು | 499.76 | 187.92 | 112.32 | 800.00 |
| 9 | ರಾಯಚೂರು | 312.35 | 117.45 | 70.20 | 500.00 |
| 10 | ದಾವಣಗೆರೆ | 187.41 | 70.47 | 42.12 | 300.00 |
| 11 | ಚಿಕ್ಕಬಳ್ಳಾಪುರ | 312.35 | 117.45 | 70.20 | 500.00 |
| 12 | ಚಿತ್ರದುರ್ಗ | 187.41 | 70.47 | 42.12 | 300.00 |
| 13 | ಕೋಲಾರ | 312.35 | 117.45 | 70.20 | 500.00 |
| 14 | ಬಳ್ಳಾರಿ | 312.35 | 117.45 | 70.20 | 500.00 |
| 15 | ಯಾದಗೀರ್ | 312.35 | 117.45 | 70.20 | 500.00 |
| | ಒಟ್ಟು | 5452.69 | 2050.32 | 1225.48 | 8728.50 |

13/3/13

ನಿರ್ದೇಶಕರು

ಸುವರ್ಣ ಗ್ರಾಮೋದಯ ಯೋಜನೆ ಹಾಗೂ
ಪದನಿಮಿತ್ತ ಸರ್ಕಾರದ ಉಪಕಾರ್ಯದರ್ಶಿ
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

13/03/13